# ಶುಭವಾರ್ತೆ ಕಥಾಪುಸ್ತಕ

## ನಾಲ್ಕು



ಇದು ನನ್ನ ಶುಭವಾರ್ತೆ ನಾಲ್ಕನೆ ಕಥಾಪುಸ್ತಕ

ನನ್ನ ಹೆಸರು

---

ನನ್ನ ಶುಭವಾರ್ತೆ ನಾಲ್ಕನೆ ಕಥಾಪುಸ್ತಕವನ್ನು ನಾನು ಓದಬಲ್ಲೆ

ಈ ಕಥೆಗಳನ್ನು ಸೃಷ್ಟಿಕರ್ತನಾದ ದೇವರ ಪವಿತ್ರ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

ಈ ಕಥಾಪುಸ್ತಕದಲ್ಲಿರುವ ಎಲ್ಲ ಚಿತ್ರಗಳನ್ನು ಭಾರತದ ಬುಡಕಟ್ಟು ಮಕ್ಕಳು ಬರೆದಿದ್ದಾರೆ.
ಶುಭವಾರ್ತೆ ಕಥಾಪುಸ್ತಕ ನಾಲ್ಕು. ಕಾಪಿರೈಟ್ 2017. ಪ್ರಿಂಟೆಡ್ ಇನ್ ಇಂಡಿಯಾ. ಹೆಚ್ಚಿನ ವಿಷಯಗಳಿಗಾಗಿ ಸಂಪರ್ಕಿಸಿ:
WBTC India, P.O. Box 8478, Bangalore 560084. Email: info@wbtcindia.com





ಪರಲೋಕದಿಂದ ಬೆಂಕಿ ........................ 2-17

ಬೆಂಕಿ ಕೊಂಡ .................................... 18-32


# ಪರಲೋಕದಿಂದ ಬೆಂಕಿ

ಅನೇಕ, ಅನೇಕ, ಅನೇಕ
ವರ್ಷಗಳು ಕಳೆದವು.

ಜನರು ಬೇರೆ ದೇವರುಗಳಿಗೆ
ಹಾಡುತ್ತಿರುವುದು ನನಗೆ ಕಾಣುತ್ತಿದೆ.







ಒಬ್ಬ ಮನುಷ್ಯ ನನಗೆ ಕಾಣುತ್ತಿದ್ದಾನೆ.

ಅವನ ಹೆಸರು ಎಲೀಯ.

ಎಲೀಯನು ಸೃಷ್ಟಿಕರ್ತನಾದ
ದೇವರಿಗೆ ಹಾಡುತ್ತಿದ್ದಾನೆ.

ಬೇರೆ ದೇವರುಗಳಿಗೆ ಹಾಡುವ ಜನರಿಗೆ
ಎಲೀಯನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನಿಮ್ಮ ದೇವರುಗಳು ನಿಜದೇವರಾಗಿದ್ದರೆ,
ಅವರು ಯಜ್ಞವೇದಿಕೆಯ ಮೇಲೆ
ಬೆಂಕಿ ಬೀಳುವಂತೆ ಮಾಡಲಿ.

ಸೃಷ್ಟಿಕರ್ತನಾದ ದೇವರು ನಿಜದೇವರಾಗಿದ್ದರೆ,
ಆತನು ಯಜ್ಞವೇದಿಕೆಯ ಮೇಲೆ
ಬೆಂಕಿ ಬೀಳುವಂತೆ ಮಾಡಲಿ.’

ಹೋರಾಟ ಆರಂಭವಾಗುತ್ತದೆ...







ಬೇರೆ ದೇವರುಗಳಿಗೆ ಹಾಡುವ ಜನರು
ಯಜ್ಞವೇದಿಕೆ ಕಟ್ಟುತ್ತಿರುವುದು
ನನಗೆ ಕಾಣುತ್ತಿದೆ.

ಬೇರೆ ದೇವರುಗಳಿಗೆ ಹಾಡುವ ಜನರು
ಯಜ್ಞವೇದಿಕೆಯ ಮೇಲೆ ಒಂದು ಹೋರಿಯನ್ನು
ಇಡುತ್ತಿರುವುದು ನನಗೆ ಕಾಣುತ್ತಿದೆ.

ಬೇರೆ ದೇವರುಗಳಿಗೆ ಹಾಡುವ ಜನರು
ಹಾಡುತ್ತಾ, ಪ್ರಾರ್ಥಿಸುತ್ತಾ, ನರ್ತಿಸುತ್ತಾ

ಮೇಲಕ್ಕೆ ಕೆಳಕ್ಕೆ...ಮೇಲಕ್ಕೆ ಕೆಳಕ್ಕೆ...
ಮೇಲಕ್ಕೆ ಕೆಳಕ್ಕೆ ನೆಗೆಯುತ್ತಿರುವುದು
ನನಗೆ ಕಾಣುತ್ತಿದೆ.







ಬೇರೆ ದೇವರುಗಳಿಗೆ ಹಾಡುವ ಜನರು

ಕೇಳಿಸಿಕೊಳ್ಳುತ್ತಾ...ಕೇಳಿಸಿಕೊಳ್ಳುತ್ತಾ...
ಕೇಳಿಸಿಕೊಳ್ಳುತ್ತಾ ಇರುವುದು
ನನಗೆ ಕಾಣುತ್ತಿದೆ.

ಬೇರೆ ದೇವರುಗಳು ಉತ್ತರಿಸುವುದಿಲ್ಲ.







ಬೇರೆ ದೇವರುಗಳಿಗೆ ಹಾಡುವ ಜನರಿಗೆ ಎಲೀಯನು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

'ಜೋರಾಗಿ ಪ್ರಾರ್ಥಿಸಿ, ಇನ್ನಷ್ಟು ನರ್ತಿಸಿ ಮತ್ತು ಇನ್ನೂ ಮೇಲಕ್ಕೆ ನೆಗೆಯಿರಿ.

ಬಹುಶಃ ನಿಮ್ಮ ದೇವರುಗಳು ನಿದ್ರಿಸುತ್ತಿದ್ದಾರೆ.'

ಬೇರೆ ದೇವರುಗಳಿಗೆ ಹಾಡುವ ಜನರು

ಜೋರಾಗಿ ಪ್ರಾರ್ಥಿಸುತ್ತಾ, ಇನ್ನಷ್ಟು
ನರ್ತಿಸುತ್ತಾ ಮತ್ತು ಇನ್ನೂ ಎತ್ತರಕ್ಕೆ...

ಮೇಲಕ್ಕೆ ಕೆಳಕ್ಕೆ...ಮೇಲಕ್ಕೆ ಕೆಳಕ್ಕೆ...
ಮೇಲಕ್ಕೆ ಕೆಳಕ್ಕೆ ನೆಗೆಯುತ್ತಿರುವುದು
ನನಗೆ ಕಾಣುತ್ತಿದೆ.







ಬೇರೆ ದೇವರುಗಳಿಗೆ ಹಾಡುವ ಜನರು
ಕೇಳಿಸಿಕೊಳ್ಳುತ್ತಾ...ಕೇಳಿಸಿಕೊಳ್ಳುತ್ತಾ...
ಕೇಳಿಸಿಕೊಳ್ಳುತ್ತಾ ಇರುವುದು
ನನಗೆ ಕಾಣುತ್ತಿದೆ.


ಬೇರೆ ದೇವರುಗಳು ಉತ್ತರಿಸುವುದಿಲ್ಲ.

ಸೃಷ್ಟಿಕರ್ತನಾದ ದೇವರಿಗೆ ಹಾಡುವ
ಎಲೀಯನು ಯಜ್ಞವೇದಿಕೆ ಕಟ್ಟುತ್ತಿರುವುದು
ನನಗೆ ಕಾಣುತ್ತಿದೆ.

ಸೃಷ್ಟಿಕರ್ತನಾದ ದೇವರಿಗೆ ಹಾಡುವ
ಎಲೀಯನು ಯಜ್ಞವೇದಿಕೆ ಮೇಲೆ ಒಂದು
ಹೋರಿಯನ್ನು ಇಡುತ್ತಿರುವುದು
ನನಗೆ ಕಾಣುತ್ತಿದೆ.







ಸೃಷ್ಟಿಕರ್ತನಾದ ದೇವರಿಗೆ ಹಾಡುವ
ಎಲೀಯನು ಯಜ್ಞವೇದಿಕೆಯ ಸುತ್ತಲೂ
ನೀರನ್ನು ಸುರಿಯುತ್ತಾ...ಸುರಿಯುತ್ತಾ...
ಸುರಿಯುತ್ತಾ ಇರುವುದು ನನಗೆ
ಕಾಣುತ್ತಿದೆ.

ಸೃಷ್ಟಿಕರ್ತನಾದ ದೇವರಿಗೆ ಹಾಡುವ
ಎಲೀಯನು ಯಜ್ಞವೇದಿಕೆ ಕಟ್ಟುತ್ತಿರುವುದು
ನನಗೆ ಕಾಣುತ್ತಿದೆ.

ಸೃಷ್ಟಿಕರ್ತನಾದ ದೇವರಿಗೆ ಹಾಡುವ
ಎಲೀಯನು ಯಜ್ಞವೇದಿಕೆ ಮೇಲೆ ಒಂದು
ಹೋರಿಯನ್ನು ಇಡುತ್ತಿರುವುದು
ನನಗೆ ಕಾಣುತ್ತಿದೆ.







ಪ್ರತಿಯೊಬ್ಬರು ನೋಡುತ್ತಾ...
ಕಾಯುತ್ತಾ...ವೀಕ್ಷಿಸುತ್ತಾ ಇದ್ದಾರೆ.

ಆಗ ಇದಾಯಿತು!

ಸೃಷ್ಟಿಕರ್ತನಾದ ದೇವರು ಮೇಲಿನಿಂದ ಯಜ್ಞವೇದಿಕೆಗೆ ಬೆಂಕಿ ಕಳುಹಿಸಿದನು!







ಎಲ್ಲಾ ಜನರು ಸೃಷ್ಟಿಕರ್ತನಾದ ದೇವರಿಗೆ ಹಾಡುತ್ತಿರುವುದು ನನಗೆ ಕಾಣುತ್ತಿದೆ.


ಎಲ್ಲಾ ಜನರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು.'

# ಬೆಂಕಿ ಕೊಂಡ

ಅನೇಕ ವರ್ಷಗಳು ಕಳೆದವು.

ನನಗೆ ರಾಜನು ಕಾಣುತ್ತಿದ್ದಾನೆ.

ರಾಜನು  ಚಿನ್ನದ ಪ್ರತಿಮೆಯನ್ನು
ನಿರ್ಮಿಸುತ್ತಿರುವುದು
ನನಗೆ ಕಾಣುತ್ತಿದೆ.







ರಾಜನು ಜನರಿಗೆ ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

'ಚಿನ್ನದ ಪ್ರತಿಮೆಗೆ ಹಾಡಿರಿ,
ಇಲ್ಲವಾದರೆ, ನಾನು ನಿಮ್ಮನ್ನು
ಬೆಂಕಿಗೆ ಎಸೆಯುವೆನು.'

ಅದೋ ನೋಡಿ, ಬೆಂಕಿ ಕಾವೇರಿದೆ...
ಕಾವೇರಿದೆ...ಕಾವೇರಿದೆ!







ಮೂರು ಬಾಲಕರು ಸೃಷ್ಟಿಕರ್ತನಾದ
ದೇವರಿಗೆ ಹಾಡುತ್ತಿರುವುದು
ನನಗೆ ಕಾಣುತ್ತಿದೆ.

ಮೂರು ಬಾಲಕರು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ: 'ಸೃಷ್ಟಿಕರ್ತನಾದ
ದೇವರಿಗೆ ಮಾತ್ರ ನಾವು ಹಾಡುತ್ತೇವೆ.'

ರಾಜನು ತುಂಬ, ತುಂಬ, ತುಂಬ
ಕೋಪದಿಂದಿರುವುದು ನನಗೆ ಕಾಣುತ್ತಿದೆ.







ರಾಜನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ಸೃಷ್ಟಿಕರ್ತನಾದ ದೇವರಿಗೆ ಮಾತ್ರ
ಹಾಡುವ ಮೂರು ಬಾಲಕರನ್ನು
ಬೆಂಕಿಗೆ ಎಸೆಯಿರಿ!’

ಅದೋ ನೋಡಿ, ಬೆಂಕಿ ಕಾವೇರಿದೆ...
ಕಾವೇರಿದೆ...ಕಾವೇರಿದೆ!








ಸೃಷ್ಟಿಕರ್ತನಾದ ದೇವರಿಗೆ ಮಾತ್ರ
ಹಾಡುವ ಮೂರು ಬಾಲಕರನ್ನು ಬೆಂಕಿಗೆ
ಎಸೆಯುತ್ತಿರುವುದು ನನಗೆ ಕಾಣುತ್ತಿದೆ.



ಅದೋ ನೋಡಿ, ಬೆಂಕಿ ಕಾವೇರಿದೆ...
ಕಾವೇರಿದೆ...ಕಾವೇರಿದೆ!







ರಾಜನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:


‘ಅದೋ ನೋಡಿ, ಮೂರು ಬಾಲಕರು
ಬೆಂಕಿಯೊಳಗೆ ನಡೆದಾಡುತ್ತಿದ್ದಾರೆ!

ಈಗ ನಾಲ್ಕು ಜನರು ಬೆಂಕಿಯೊಳಗೆ
ನಡೆದಾಡುತ್ತಿದ್ದಾರೆ!


ಮೂರು ಬಾಲಕರು ಮತ್ತು
ಸೃಷ್ಟಿಕರ್ತನಾದ ದೇವರಂತಿರುವವನು!’

ಸೃಷ್ಟಿಕರ್ತನಾದ ದೇವರಿಗೆ ಮಾತ್ರ ಹಾಡುವ
ಮೂರು ಬಾಲಕರಿಗೆ ರಾಜನು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ದೊಡ್ಡ ಬೆಂಕಿಯೊಳಗಿಂದ ಹೊರಬನ್ನಿರಿ!’







ಅದೋ ನೋಡಿ, ಬೆಂಕಿ ಕಾವೇರಿದೆ...
ಕಾವೇರಿದೆ...ಕಾವೇರಿದೆ!

ಮೂರು ಬಾಲಕರು ಬೆಂಕಿಯೊಳಗಿಂದ ಹೊರಬರುತ್ತಿರುವುದು ನನಗೆ ಕಾಣುತ್ತಿದೆ.

ಮೂರು ಬಾಲಕರಿಗೆ ಬೆಂಕಿಯಿಂದ ಯಾವ ಗಾಯವಾಗಿಲ್ಲದಿರುವುದು ನನಗೆ ಕಾಣುತ್ತಿದೆ.







ರಾಜನು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: ‘ಸೃಷ್ಟಿಕರ್ತನಾದ ದೇವರಿಗೆ ಹಾಡಿರಿ.

ಸೃಷ್ಟಿಕರ್ತನಾದ ದೇವರು ಮೂರು ಬಾಲಕರನ್ನು ಬೆಂಕಿಯೊಳಗಿಂದ ಕಾಪಾಡಿದನು.’

ಬೇರೆ ಯಾವ ದೇವರಿಗೂ
ಕಾಪಾಡುವ ಶಕ್ತಿಯಿಲ್ಲ.

ಸೃಷ್ಟಿಕರ್ತನಾದ ದೇವರೇ
ನಿಜವಾದ ದೇವರು.

ಸೃಷ್ಟಿಕರ್ತನಾದ ದೇವರು ಬರುತ್ತಿದ್ದಾನೆ...

